1

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/37/ಸಸೇಪ್ರ/2017-18/ಗೌವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:16.09.2017

**ಸುತ್ತೋಲೆ**

**ವಿಷಯ:** ಅತ್ಯುನ್ನತ ಸೇವೆ ಸಲ್ಲಿಸಿದ/ಸಾಧನೆ ಮಾಡಿರುವ ರಾಜ್ಯ ಸರ್ಕಾರಿ ನೌಕರರಿಗೆ ಸರ್ವೋತ್ತಮ ಸೇವಾ ಪ್ರಶಸ್ತಿ ನೀಡಲು ನಾಮನಿರ್ದೇಶನಗಳನ್ನು ಕಳುಹಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ:ಇಡಿ/159/ಅಅವಿ/2016, ದಿನಾಂಕ:29.05.2017 ಹಾಗೂ ನೆನಪೋಲೆ ಪತ್ರ ದಿ:22.08.2017.

*****

ರಾಜ್ಯ ಸರ್ಕಾರವು ಅತ್ಯುನ್ನತ ಸೇವೆ/ಸಾಧನೆ ಮಾಡಿದ ರಾಜ್ಯ ಸರ್ಕಾರಿ ನೌಕರರಿಗೆ **"ಸರ್ವೋತ್ತಮ ಸೇವಾ ಪ್ರಶಸ್ತಿ"** ನೀಡುವ ಯೋಜನೆ ಜಾರಿಗೆ ತರಲಾಗಿದ್ದು, ಯೋಜನೆಯಲ್ಲಿ ಜಿಲ್ಲಾವಾರು ಪ್ರಶಸ್ತಿ, ಇಲಾಖಾವಾರು ಪ್ರಶಸ್ತಿ ಮತ್ತು ರಾಜ್ಯ ಪ್ರಶಸ್ತಿಗಳನ್ನು ನೀಡಲು ಉದ್ದೇಶಿಸಿರುತ್ತದೆ. ಅದರಂತೆ 2017-18ನೇ ಸಾಲಿನ ಪ್ರಶಸ್ತಿಗಳಿಗಾಗಿ ಇಲಾಖಾ ವ್ಯಾಪ್ತಿಯ ಅರ್ಹ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಆಯ್ಕೆ ಮಾಡಿ ನಾಮ ನಿರ್ದೇಶನಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) ವಿಭಾಗಕ್ಕೆ ದಿ:30.09.2017ರೊಳಗೆ ಸಲ್ಲಿಸಲು ತಿಳಿಸಿರುವ ಹಿನ್ನೆಲೆಯಲ್ಲಿ ಇಲಾಖೆಯ ಅತ್ಯುತ್ತಮ ಸೇವೆ ಮತ್ತು ಸಾಧನೆ ಮಾಡಿದ ಸರ್ಕಾರಿ ನೌಕರರನ್ನು ಸರ್ಕಾರಿ ಆದೇಶಗಳಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ನು ಅನುಸರಿಸಿ ಆಯ್ಕೆ ಮಾಡಬೇಕಾಗಿರುತ್ತದೆ. ಆದ್ದರಿಂದ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ತಮ್ಮ ಕಛೇರಿ ವ್ಯಾಪ್ತಿಯಲ್ಲಿನ ಸರ್ಕಾರಿ ಕಾಲೇಜುಗಳಿಂದ/ಪ್ರಾದೇಶಿಕ ಕಛೇರಿಯಿಂದ ಮಾನದಂಡಗಳ ಅರ್ಹತೆ ಹೊಂದಿರುವ ([redacted]) ಒಬ್ಬ 'ಡಿ' ಗ್ರೂಪ್ ನೌಕರ, ಒಬ್ಬ 'ಸಿ' ಗ್ರೂಪ್ ನೌಕರ, ಒಬ್ಬ 'ಬಿ' ಗ್ರೂಪ್ ಅಧಿಕಾರಿ (ಗೆಜೆಟೆಡ್ ಮ್ಯಾನೇಜರ್/ಸಹಾಯಕ ನಿರ್ದೇಶಕರು) ಆಯ್ಕೆ ಮಾಡಿ, **ಇಲಾಖಾ ವಿಚಾರಣೆ/ಲೋಕಾಯುಕ್ತರ ತನಿಖೆ/ಕ್ರಿಮಿನಲ್ ಮೊಕದ್ದಮೆ/ನ್ಯಾಯಾಂಗ ತನಿಖೆ ಇಲ್ಲವೆಂದು ದೃಢೀಕೃತ ಪ್ರಮಾಣ ಪತ್ರದೊಂದಿಗೆ** ಸೀಲ್ಡ್ ಕವರ್‌ನಲ್ಲಿ ಕೇಂದ್ರ ಕಛೇರಿಯ ಆಯ್ಕೆ ಸಮಿತಿಗೆ ದಿ:20.09.2017ರೊಳಗಾಗಿ ತಲುಪುವಂತೆ ಕಳುಹಿಸಲು ಸೂಚಿಸಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:-**

ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗಾ, ಮಂಗಳೂರು ಮತ್ತು ಶಿವಮೊಗ್ಗ - ಸೂಕ್ತ ಕ್ರಮಕ್ಕಾಗಿ.

**ಪ್ರತಿಯನ್ನು :**

1. ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು - ಸದರಿ ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ.
2. ಕಛೇರಿ ಪ್ರತಿ.

*D:2016-17/Suma/CR Section/Sarvothama Seva Prashashti*

ಲಗತ್ತು

1) ನಾಮನಿರ್ದೇಶನ ನಮೂನೆ ಲಗತ್ತಿಸಿದೆ

73

## ಅನುಬಂಧ

### ಸರ್ವೋತ್ತಮ ಸೇವಾ ಪ್ರಶಸ್ತಿ ನಾಮನಿರ್ದೇಶನ ನಮೂನೆ

| ಕ್ರ. ಸಂ. | ನಾಮ ನಿರ್ದೇಶಿತ ಅಧಿಕಾರಿ/ ನೌಕರರ ಹೆಸರು | ಪದನಾಮ ಮತ್ತು ಇಲಾಖೆ | ನಾಮ ನಿರ್ದೇಶನಗಳನ್ನು ಶಿಫಾರಸ್ಸು ಮಾಡಿರುವ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು | ಅಧಿಕಾರಿ/ ನೌಕರರ ಅತ್ಯುನ್ನತ ಸೇವೆ/ ಸಾಧನೆಗಳ ವಿವರ | ಅಧಿಕಾರಿ/ ನೌಕರರ ವಿಶೇಷ ಕಾರ್ಯ ನಿರ್ವಹಣಾ ವರದಿ | ನ್ಯಾಯಾಂಗ ತನಿಖೆ/ ಕ್ರಿಮಿನಲ್ ಮೊಕದ್ದಮೆ ಬಾಕಿ ಇದೆಯೇ/ ಹೂಡಲು ಉದ್ದೇಶಿಸಲಾಗಿದೆಯೇ | ಲೋಕಾಯುಕ್ತ ವಿಚಾರಣೆ / ಇಲಾಖಾ ವಿಚಾರಣೆ ಬಾಕಿ ಇದೆಯೇ/ ಹೂಡಲು ಉದ್ದೇಶಿಸಲಾಗಿದೆಯೇ | ಇತರೆ ಯಾವುದೇ ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

73

## ಅನುಬಂಧ

### ಸರ್ವೋತ್ತಮ ಸೇವಾ ಪ್ರಶಸ್ತಿ ನಾಮನಿರ್ದೇಶನ ನಮೂನೆ

| ಕ್ರ ಸಂ. | ನಾಮ ನಿರ್ದೇಶಿತ ಅಧಿಕಾರಿ/ ನೌಕರರ ಹೆಸರು | ಪದನಾಮ ಮತ್ತು ಇಲಾಖೆ | ನಾಮ ನಿರ್ದೇಶನಗಳನ್ನು ಶಿಫಾರಸ್ಸು ಮಾಡಿರುವ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು | ಅಧಿಕಾರಿ/ ನೌಕರರ ಅತ್ಯುನ್ನತ ಸೇವೆ/ ಸಾಧನೆಗಳ ವಿವರ | ಅಧಿಕಾರಿ/ ನೌಕರ ವಿಶೇಷ ಕಾರ್ಯ ನಿರ್ವಹಣಾ ವರದಿ | ನ್ಯಾಯಾಂಗ ತನಿಖೆ/ ಕ್ರಿಮಿನಲ್ ಮೊಕದ್ದಮೆ ಬಾಕಿ ಇದೆಯೇ/ ಹೂಡಲು ಉದ್ದೇಶಿಸ ಲಾಗಿದೆಯೇ | ಲೋಕಾಯುಕ್ತ ವಿಚಾರಣೆ / ಇಲಾಖಾ ವಿಚಾರಣೆ ಬಾಕಿ ಇದೆಯೇ/ ಹೂಡಲು ಉದ್ದೇಶಿಸ ಲಾಗಿದೆಯೇ | ಇತರೆ ಯಾವುದೇ ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

- ವಿನೂತನ ರೀತಿ ಪದ್ಧತಿ/ಯೋಜನೆಯನ್ನು ಜಾರಿಗೆ ತರುವುದು.
- ಕಾರ್ಯ ವೃಂದದಲ್ಲಿ ಬದಲಾವಣೆ ಮತ್ತು ಸಂಸ್ಥೆಗಳ ವೃದ್ಧಿ.
- ನಾಗರೀಕ ಸೇವಾ ವ್ಯವಸ್ಥೆಯಲ್ಲಿ ಗುಣಾತ್ಮಕ, ನಾಗರೀಕ ಸ್ನೇಹಿ ಮತ್ತು ಭ್ರಷ್ಟಾಚಾರ ರಹಿತ ವಾತಾವರಣವನ್ನು ನಿರ್ಮಿಸುವುದು.
- ನಾಗರೀಕರ ಅವಶ್ಯಕತೆಗನುಗುಣವಾಗಿ ವಿನೂತನ ರೀತಿ ಪದ್ಧತಿ ಅಳವಡಿಸಿಕೊಳ್ಳುವಿಕೆ.
- ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ಅತ್ಯುನ್ನತ ಕಾರ್ಯ.
- ಮೌಲ್ಯವರ್ಧಿತ ಸೇವೆ, ವೃದ್ಧಿ, ಮುಂದಾಳತ್ವ ಮತ್ತು ಚಲನಶೀಲಗಳ ರಚನೆ.

ಪ್ರಶಸ್ತಿಗಳಿಗಾಗಿ ನಾಮ ನಿರ್ದೇಶನವನ್ನು ನಿಗದಿತ ಪ್ರಪತ್ರದಲ್ಲಿ ಸ್ವಯಂ ನಾಮ ನಿರ್ದೇಶನ/ಅಥವಾ ಆ ಕಾರ್ಯ ತಿಳಿದಿರುವ ವ್ಯಕ್ತಿಯಿಂದ ನಾಮ ನಿರ್ದೇಶನ ಮತ್ತು ಒಬ್ಬ ವ್ಯಕ್ತಿಗನುಗುಣವಾಗಿ ಹಲವು ನಾಮನಿರ್ದೇಶನಗಳು ಸ್ವೀಕೃತವಾದಲ್ಲಿ ಅವುಗಳನ್ನು ಒಂದು ನಾಮ ನಿರ್ದೇಶನವೆಂದು ಪರಿಗಣಿಸುವುದು.

ನಾಮನಿರ್ದೇಶನಕ್ಕೆ ಅತ್ಯುನ್ನತ ಸೇವೆ/ಸಾಧನೆಗಳಿಗೆ ಈ ಕೆಳಕಾಣಿಸಿದ ಮಾನದಂಡಗಳಿಗೆ ಅನುಗುಣವಾಗಿರಬೇಕಾಗಿರುತ್ತದೆ.

- ವಿನೂತನತೆ ಕಾರ್ಯರೂಪಕ್ಕೆ ತರುವುದು ಮತ್ತು ಮುಂದಾಳತ್ವ ವಹಿಸುವುದು.
- ಪ್ರಸ್ತುತ ಇರುವ ಅಡೆತಡೆಗಳಿಗೆ ಮಾಹಿತಿ ಪರಿಶೋಧನೆ ಮುಖಾಂತರ ಪರಿಹಾರ ಕಂಡುಕೊಳ್ಳುವಿಕೆ.
- ಕಿರು ಹಾಗೂ ದೀರ್ಘ ಸಮಯದ ಫಲಿತಾಂಶ ಸಾಧನೆಗೆ ಯೋಜನೆ.
- ಕಾರ್ಯ ಕ್ಷಮತೆ ಮತ್ತು ಸೇವಾ ವೃದ್ಧಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ.
- ನಿಗದಿತ ಫಲಿತಾಂಶ ಸಾಧನೆಗೆ ಸರಳೀಕೃತ ಕಾರ್ಯ ವಿಧಾನ ವ್ಯವಸ್ಥೆ.
- ಕಾರ್ಯ ನಿರ್ವಹಣೆ ಫಲಿತಾಂಶವು ಗುಣಾತ್ಮಕ ಅಂಶದಲ್ಲಿರುವುದು.
- ಪ್ರತ್ಯಕ್ಷ್ಯ ಹಾಗೂ ಪರೋಕ್ಷವಾಗಿ ನಾಗರೀಕರಿಗೆ ಅನುಕೂಲ.
- ಸರ್ಕಾರದ / ಸಾರ್ವಜನಿಕ ಹಣದ ಉಳಿತಾಯ.